ಮತ್ತು ದಾವಣಗೆರೆ ಜಿಲ್ಲೆಗಳನ್ನಾಗಿ ರಚಿಸಲಾಗಿದ್ದು, ಈ ಜಿಲ್ಲೆಗಳಲ್ಲಿ ಇತರೆ ಜಿಲ್ಲೆಗಳಂತೆ ಸ್ವಯಂ ಆಡಳಿತ ನಡೆಸುವಂತಹ ವ್ಯವಸ್ಥೆ ಸರ್ಕಾರದಿಂದ ಮಾಡಲಾಗಿದೆಯೇ?

ಆ) ಹಾಗಿದ್ದಲ್ಲಿ ಇದೇ ರೀತಿ ಇನ್ನೂ ಕೆಲವು ಜಿಲ್ಲೆಗಳನ್ನಾಗಿ ವಿಂಗಡಿಸುವುದರ ಬಗ್ಗೆ ಸರ್ಕಾರ ಏನು ತೀರ್ಮಾನ ಕೈಗೊಂಡಿದೆ?

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):

ಅ) ಹೌದು.

ಆ) ಗುಲ್ಬರ್ಗಾ ಮತ್ತು ಬೆಳಗಾಂ ಜಿಲ್ಲೆಗಳನ್ನು ಪುನರ್ ವಿಂಗಡಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ವಿಷಯ: ಮೈಸೂರು ನಗರಕ್ಕೆ ಮೇಳಾಪುರದಿಂದ ಕುಡಿಯುವ ನೀರಿನ ಯೋಜನೆಯ ಪ್ರಗತಿ

1061 (1514)

ಶ್ರೀ ಇ.ಮಾರುತಿರಾವ್ ಪವಾರ್ (ನರಸಿಂಹರಾಜ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರಕ್ಕೆ ಏಷ್ಯಾಭಿವೃದ್ಧಿ ಬ್ಯಾಂಕ್ ನೆರವಿನಿಂದ ಕೈಗೊಳ್ಳಬೇಕಾದ ವರ್ತುಲ ರಸ್ತೆ ಒಳಚರಂಡಿ ಕಾಮಗಾರಿ ಹಾಗೂ ಮೇಳಾಪುರ ಕುಡಿಯುವ ನೀರಿನ ಯೋಜನೆಗಳ ಕಾಮಗಾರಿಯ ಭೌತಿಕ ಪ್ರಗತಿ ಯಾವ ಹಂತದಲ್ಲಿದೆ.

ಆ) ಈ ಮೇಲ್ಕಂಡ ಕಾಮಗಾರಿಗಳನ್ನು ಯಾವಾಗ ಪ್ರಾರಂಭ ಮಾಡಲಾಗುವುದು.

ಶ್ರೀ ಬಿ.ಎನ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):

ಅ) ಏಷ್ಯಾಭಿವೃದ್ಧಿ ಬ್ಯಾಂಕಿನ ನೆರವಿನಿಂದ ಮೈಸೂರು ನಗರಕ್ಕೆ ಮೇಳಾಪುರದಿಂದ ಕುಡಿಯುವ ನೀರಿನ ಯೋಜನೆಯಡಿಯಲ್ಲಿ ನಾಲ್ಕು ಕಾಮಗಾರಿ ಪ್ಯಾಕೇಜುಗಳಿಗೆ ಟೆಂಡರ್‌ಗಳನ್ನು ಸ್ವೀಕರಿಸಲಾಗಿದ್ದು, ಅವುಗಳ ಪೈಕಿ ಮೂಲ ಸ್ಥಾವರದ ಕಾಮಗಾರಿ ಮತ್ತು ಕಚ್ಚಾ ನೀರಿನ ಮುಖ್ಯ ಕೊಳವೆ ಮಾರ್ಗಕ್ಕೆ, ಗುತ್ತಿಗೆದಾರರು ಒಪ್ಪಂದ ಕರಾರನ್ನು ಮಾಡಿಕೊಂಡಿದ್ದಾರೆ. ಉಳಿದೆರಡು ಕಾಮಗಾರಿಗೆ ಗುತ್ತಿಗೆದಾರರನ್ನು ನೇಮಿಸಬೇಕಾಗಿದೆ. ಇದೇ ನಗರಕ್ಕೆ ಒಳಚರಂಡಿ ಕಾಮಗಾರಿಗಳ ಒಟ್ಟು ಆರು ಟೆಂಡರು ಪ್ಯಾಕೇಜುಗಳ ಪೈಕಿ, ಎರಡು ಪ್ಯಾಕೇಜುಗಳಿಗೆ ಟೆಂಡರನ್ನು ಸ್ವೀಕರಿಸಲಾಗಿದ್ದು ''ಬಿ'' ಡಿಸ್ಟ್ರಿಕ್ಟ್‌ನ ಗ್ರಾಮ ಸಾರವನ್ನು ಹೊರಹಾಕುವ ಕೊಳವೆ ಮಾರ್ಗಕ್ಕೆ ಗುತ್ತಿಗೆದಾರರು ಒಪ್ಪಂದ ಕರಾರನ್ನು ಮಾಡಿಕೊಂಡಿದ್ದಾರೆ.

ವರ್ತುಲ ರಸ್ತೆ ನಿರ್ಮಾಣಕ್ಕೆ ಬೇಕಾಗುವ ಭೂ ಸ್ವಾಧೀನ ಕ್ರಮ ಅಂತಿಮ ಘಟ್ಟದಲ್ಲಿದ್ದು ಇನ್ನು ಒಂದು ತಿಂಗಳಲ್ಲಿ ಭೂ ಸ್ವಾಧೀನ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಆ) ಕುಡಿಯುವ ನೀರಿನ ಯೋಜನೆಯ ಕಾಮಗಾರಿಗಳ ಕಾರ್ಯವು 98ರ ಮೇ ಮಾಹೆಯಲ್ಲಿ ಮತ್ತು ಒಳಚರಂಡಿ ಯೋಜನೆಗಳ ಕಾಮಗಾರಿಗಳನ್ನು 98ರ ಜೂನ್ ಮಾಹೆಯಲ್ಲಿ ಪ್ರಾರಂಭಿಸಲು ಉದ್ದೇಶಿಸಲಾಗಿದೆ. ವರ್ತುಲ ರಸ್ತೆಗೆ ಸಂಬಂಧಿಸಿದಂತೆ ಭೂಸ್ವಾಧೀನ ಪ್ರಕ್ರಿಯೆ ಮುಗಿದ ನಂತರ ಗುತ್ತಿಗೆದಾರರನ್ನು ನಿಗದಿಪಡಿಸಲು ಟೆಂಡರ್ ಕರೆಯಲಾಗುವುದು.

ವಿಷಯ: ಮೈಸೂರಿನ ನರಸಿಂಹರಾಜ ಕ್ಷೇತ್ರದಲ್ಲಿ ನಿವೇಶನ ಸಕ್ರಮಗೊಳಿಸಲು ಬಂದಿರುವ ಅರ್ಜಿಗಳು.

1062 (1443)

ಶ್ರೀ ಇ.ಮಾರುತಿರಾವ್ ಪವಾರ್ (ನರಸಿಂಹರಾಜ): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನರಸಿಂಹರಾಜ ಕ್ಷೇತ್ರದಲ್ಲಿ ಎಷ್ಟು ರೆವಿನ್ಯೂ ಬಡಾವಣೆಗಳಿವೆ? ನಿವೇಶನ ಸಕ್ರಮಗೊಳಿಸಲು ಅರ್ಜಿಗಳನ್ನು ವಿತರಿಸಲಾಗಿದೆಯೇ? ಈ ಅರ್ಜಿಗಳನ್ನು ಯಾರ ಮೂಲಕ ವಿತರಿಸಲಾಗುತ್ತಿದೆ?

ಆ) ಇದುವರೆವಿಗೂ ವಿತರಿಸಲಾದ ಎಷ್ಟು ಅರ್ಜಿಗಳನ್ನು ವಾಪಸ್ ಪಡೆಯಲಾಗಿದೆ? ಯಾವ ಯಾವ ಬಡಾವಣೆಗಳಿಗೆ ಇನ್ನೂ ಅರ್ಜಿಗಳನ್ನು ವಿತರಿಸಬೇಕಾಗಿದೆ?

ಇ) ರೆವಿನ್ಯೂ ನಿವೇಶನ ಸಕ್ರಮಗೊಳಿಸುವಲ್ಲಿ ಸಂಗ್ರಹಿಸಿರುವ ಹಣವೆಷ್ಟು? ಮೈಸೂರು ನಗರ ಪಾಲಿಕೆಯವರು ಇನ್ನು ಎಷ್ಟು ಹಣ ಸಂಗ್ರಹಿಸಬಹುದೆಂದು ನಿರೀಕ್ಷಿಸಲಾಗಿದೆ; ಈ ಹಣವನ್ನು ಇನ್ನು ಎಷ್ಟು ತಿಂಗಳಲ್ಲಿ ಸಂಗ್ರಹಿಸುವ ಗುರಿ ಹೊಂದಿರುತ್ತಾರೆ?

ಶ್ರೀ ಮೀರಾಜುದ್ದೀನ್ ಪಟೇಲ್ (ಪೌರಾಡಳಿತ ರಾಜ್ಯ ಸಚಿವರು):

ಅ) ನರಸಿಂಹರಾಜ ಕ್ಷೇತ್ರದಲ್ಲಿ 19 ರೆವಿನ್ಯೂ ಬಡಾವಣೆಗಳಿವೆ. ರೆವಿನ್ಯೂ ನಿವೇಶನಗಳನ್ನು ನಗರ ಪಾಲಿಕೆಯು ಸಕ್ರಮಗೊಳಿಸುತ್ತಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.